ಹೋರಾಡಿದ ಮಗಳು ಶೋಷಕನ ಮನೆಯಲ್ಲಿ ಶೋಷಣೆ ವಿರುದ್ಧ ಸಿಡಿದು ನಿಂತ ಮಗಳ ಪ್ರೇಮವನ್ನು ಕೊಂದ ಕೊಲೆಪಾತಕ ನಾನು. ಬದುಕನ್ನು ಬರಿದು ಮಾಡಿದ ಸ್ವಾರ್ಥಿ, ಮತಾಂಧ. ಹಳಿದುಕೊಳ್ಳುತ್ತೇನೆ. ನನಗಾಗಿ, ನನ್ನ ಮನೆತನಕ್ಕಾಗಿ ಅವಳು ಮಾಡಿದ ತ್ಯಾಗ, ಕೈಗೊಂಡ ತೀರ್ಮಾನ ನನ್ನನ್ನು ಚಿತ್ರಹಿಂಸೆಗೆ ಗುರಿಮಾಡುತ್ತದೆ. ಅವಳ ತಲೆ ನೇವರಿಸಬೇಕು. ನಾಲ್ಕು ಸಾಂತ್ವನದ ಮಾತು ಹೇಳಿ ಕ್ಷಮೆ ಯಾಚಿಸಬೇಕು ಎಂದೆಲ್ಲ ಮನ ತುಡಿಯುತ್ತದೆ. ಆಲೋಚನೆಯಲ್ಲಿ ಹಣ್ಣಾಗುತ್ತೇನೆ.

ಮಂಟಪದ ಕಡೆ ನೋಡುವಾಗ ಒಬ್ಬರೂ ಕಾಣುವುದಿಲ್ಲ. ಎಲ್ಲರೂ ತಿಂಡಿ ತಿನ್ನುವ ಗಲಾಟೆಯಲ್ಲಿರುತ್ತಾರೆ. ಗಡ್ಡದವರೂ ಪತ್ತೆಯಿಲ್ಲ! ಬಳುವಳಿ ರಾಶಿಯ ಬಳಿ ಕೂತು ಒಂದೊಂದಾಗಿ ತೆಗೆದಿಡುತ್ತಿರುವ ಭಾಗ್ಯಳ ಬಳಿ ತೆರಳಿ ರಾಶಿಯಲ್ಲಿ ಕೆದಕಿ ಗಡ್ಡದವ ಕೊಟ್ಟ ಉಡುಗೊರೆ ತೆಗೆಯುತ್ತೇನೆ. ಭೀತಿಯಿಂದ ರ್‍ಯಾಪರ್ ಕಿತ್ತು ಬಾಕ್ಸ್ ತೆರೆಯುತ್ತೇನೆ. ಶೀಲಳ ಫೋಟೋಗಳು! ಶೀಲ ಪತ್ರಿಕೆಯವನೊಂದಿಗಿರುವ ಫೋಟೋಗಳು... ಪ್ರೇಮಪತ್ರಗಳು! ಗಪ್ಪನೆ ಮುಚ್ಚಿ, 'ಭದ್ರವಾಗಿ ಮುಚ್ಚಿಡು ಇದನ್ನ' ಎಂದು ತಾಕೀತು ಮಾಡಿ ಭಾಗ್ಯಳ ಕೈಗೆ ಒಪ್ಪಿಸುತ್ತೇನೆ. 'ಇನ್ನೇಕ್ರಿ ಭಯ, ಗೆದ್ದುಬಿಟ್ವಿ' ನಗುತ್ತ ನನ್ನೆಡೆ ನೋಡುತ್ತಾಳೆ ಭಾಗ್ಯ.

'ಖಂಡಿತ ಸೋಲು ನಮ್ಮದು ಭಾಗ್ಯ. ಶೀಲಳ ಎದುರು ನಮಗಿನ್ನೆಲ್ಲಿಯ ಹಿರಿತನ' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ, ಶೀಲಳಿಗಾಗಿ ಅರಸುತ್ತ ಅವಳ ಕೋಣೆಯತ್ತ ಹೆಜ್ಜೆ ಹಾಕುತ್ತೇನೆ. ಅವಳಿಗೆ ಮುಖ ತೋರಿಸಲೂ ನಾಚಿಕೆ. ಹಾಗಾದರೂ ಕ್ಷಮೆ ಕೇಳಬೇಕು. ಗಟ್ಟಿಯಾಗಿ ಅತ್ತಾದರೂ ಸಮಾಧಾನ ಮಾಡಿಕೊಳ್ಳಬೇಕೆಂದು ದೃಢ ಹೆಜ್ಜೆ ಹಾಕುತ್ತೇನೆ. ಅವಳ ಕೋಣೆಯ ಬಾಗಿಲು ಭದ್ರವಾಗಿದೆ. ಒಳಗಿರುವವರು ಒಮ್ಮೆಲೆ ನಕ್ಕಂತೆ ಆಗುತ್ತದೆ. ಶೀಲಳ ಮಧುರ ಕಂಠದಿಂದ ಅಲೆ ಅಲೆಯಾಗಿ ಬರುವ ನಗೆಯನ್ನು ಗುರುತಿಸುತ್ತೇನೆ. ಅಪ್ರತಿಭನಾಗುತ್ತೇನೆ.

'ಅಲ್ವೆ, ಆ ಬಾಬುನ ಅಷ್ಟೊಂದು ಪ್ರೇಮಿಸ್ತೀನಿ ಅಂತ ಹೇಳ್ತೋತಾ ಇದ್ದೆ. ಮಳ್ಳಿಹಂಗೆ ಹಳ್ಳಿಗೆ ಬಂದು ದೊಡ್ಡ ಅಧಿಕಾರಿ ಕೈಹಿಡಿದುಬಿಟ್ಟೆಯಲ್ಲೆ' ಗೇಲಿ ಮಾಡುತ್ತಿದ್ದಾಳೆ, ಶೀಲಳ ಗೆಳತಿ ಮಾಲತಿ.

'ಸ್ಟುಪಿಡ್, ಪ್ರೇಮಾನೇ ಬೇರೆ, ಮದುವೆನೇ ಬೇರೆ ಕಣೆ' ಕತೆಗಾರ್ತಿ ಸಿಡುಕುತ್ತಾಳೆ.

'ಮತ್ತೆ ಅಂಥವಳು ಅಪ್ಪ ಅಮ್ಮನನ್ನು ಅದೆಷ್ಟು ಹೆದರಿಸಿಬಿಟ್ಟೆಯೆ? ಸತ್ತುಹೋಗ್ತೀನಿ ಅಂತ ಇಷ್ಟು ರಂಪ ಯಾಕೆ ಮಾಡಬೇಕಿತ್ತು. ಈ ಸಂಪತ್ತಿಗೆ' ಹಕ್ಕು ಚಲಾಯಿಸುತ್ತಾಳೆ, ಅಕ್ಕ ರಾಧ.

'ಅಣ್ಣ ನೋಡಿದ ಯಾವನೋ ಒಬ್ಬ ಗುಮಾಸ್ತನ್ನೋ, ಮೇಷ್ಟ್ರನ್ನೋ ಕಟ್ಟಿಕೊಳ್ಳೋದಕ್ಕಿಂತ ಪತ್ರಿಕೆಯ ಬಾಬುವೇ ಮೇಲು ಅಂತ ಹಾಗ್ಮಾಡ್ದೆ. ಎ.ಸಿ. ಸಾಹೇಬರನ್ನೇ ಅಣ್ಣ ಹಿಡ್ಕೊಂಡು ಬಂದ್ಮೇಲೆ... ವಿಚಾರ ಬದಲಾಯಿಸಿದೆ' ನಗುತ್ತಾಳೆ ವಿಚಾರವಾದಿ ಶೀಲ.

'ಪತ್ರಿಕೆಯೋನ್ನ ಗಾಳಿಗೆ ಹಾರಿಸ್ದೇ ಅನ್ನು' ಮಾಲತಿ ಅಂದಾಗ ಎಲ್ಲರೂ ಕಿಸಕ್ಕನೆ ನಗುತ್ತಾರೆ. ಅಲ್ಲಿ ನಿಲ್ಲಲಾಗುವುದಿಲ್ಲ. ಇಂಥವಳ ಬಗ್ಗೆ ದೊಡ್ಡದಾಗಿ ಕಲ್ಪಿಸಿಕೊಂಡು ಸಣ್ಣವನಾಗಿದ್ದ ನಾನು ಮತ್ತೂ ಸಣ್ಣವನಾಗಿ ತಡವರಿಸುತ್ತ ಬೆಳಕಿಗೆ ಬರುತ್ತೇನೆ. ಇಂಥವಳ ನಾಲ್ಕನೆ ದರ್ಜೆ ಪ್ರೇಮದ ಬಗ್ಗೆ ಇಷ್ಟೊಂದು 'ಸೀರಿಯೆಸ್' ಆಗಿ ತಗೊಂಡು ಹೊಯ್ದಾಡಿದ ಬಗ್ಗೆ ನಾಚಿಕೆಯಾಗುತ್ತದೆ. ಈಗ ದುಃಖವೂ ಇಲ್ಲ, ಭಯವೂ ಇಲ್ಲ, ಹೆಮ್ಮೆಯೂ ಇಲ್ಲ.